Opening of a Medical Sub-Centre in Holagundi, Hadagalli Taluk.

379. SRI N. KARIDASAVANAGOWDA (Hadagalli).—Will the Minister for Health and Family Welfare be pleased to state.—

(*a*) whether any representations were made by the public and the local MLA to open Medical Sub-Centre in Holagundi, Hadagalli Taluk since 1979 ;

(*b*) if so, the steps taken by Government to open Medical Sub-Centre ;

(*c*) the reasons for delay ?

SRI A. K. ABDUL SAMAD (Minister for Health and Family Welfare).—

(*a*) Yes.

(*b*) and (*c*) This matter is under consideration of Government and no decision has been taken yet.

ಶ್ರೀ ಎನ್. ಕರಿಬಸವನಗೌಡ.—ಅಧ್ಯಕ್ಷರೇ, ಈ ವಿಳಂಬಕ್ಕೆ ಕಾರಣವೇನೆಂದು ಮಾನ್ಯ ಮುಂತ್ರಿಗಳು ತಿಳಿಸುತ್ತಾರೆಯೇ ? ಹಣ ಹಾಗೂ ಭೂಮಿ ರೆಡಿಯಾಗಿದೆ. ಸಚಿವರಿಗೆ ಪತ್ರ ಬರೆದಿದ್ದೇವೆ, ಮಂತ್ರಿಗಳು ಪರಿಶೀಲನೆಯಲ್ಲಿದೆಯೆಂದು ಹೇಳುತ್ತಿದ್ದಾರೆ. ಯಾವ ರೀತಿಯ ಪರಿಶೀಲನೆಯಲ್ಲಿದೆ ಸ್ವಾಮಿ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಅಲ್ಲಿ ಈಗಾಗಲೇ ಆಯುರ್ವೇದಿಕ್ ಹಾಸ್ಪೆಟಲ್ ನಡೆಯುತ್ತಿದೆ. ಅದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ, ಅದರ ಬೆಳವಣಿಗೆಗೆ ಅರೇಂಜ್‌ಮೆಂಟ್ ಮಾಡಿದ್ದೇವೆ. ಪುನಃ ಅಲ್ಲಿಗೆ ಹೆಲ್ತ್ ಯೂನಿಟ್ ಕೊಡುವುದಕ್ಕೆ ತೊಂದರೆಯಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ವೇಕೆಂಟ್ ಬ್ಲಾಕ್ ಜಾಸ್ತಿ ಇದೆ. ಇದು ನಾನ್ ವೇಕೆಂಟ್ ಬ್ಲಾಕ್‌ನಲ್ಲಿ ಬರುತ್ತದೆ. ಆದ್ದರಿಂದ ತಕ್ಷಣಕ್ಕೆ ಇದು ಆಗುವುದಿಲ್ಲ. ವೇಕೆಂಟ್ ಬ್ಲಾಕ್ ಆದಮೇಲೆ ನಾವು ನೋಡುತ್ತೇವೆ.

ಶ್ರೀ ಎನ್. ಕರಿಬಸವನಗೌಡ.—ಇಲ್ಲಿ ಆಯುರ್ವೇದಿಕ್ ಆಸ್ಪತ್ರೆಯೂ ಇರಲಿ. ಸಚಿವರು ಮನಸ್ಸು ಮಾಡಿದ್ದಾನಾದಿ ಆಸ್ಪತ್ರೆಯನ್ನೂ ಕೊಡಲಿ. ನಾವು ವೈದ್ಯಕೀಯ ಉಪಕೇಂದ್ರವನ್ನು ಕೊಡಿ ಎಂದು ಕೇಳುತ್ತಿದ್ದೇವೆ. ಹಣ ರೆಡಿ ಇದೆ. ಈ ಬಗ್ಗೆ ೬ ಎಕರೆ ಭೂಮಿ ರೆಡಿ ಇದೆ. ಆರು ಪತ್ರಗಳನ್ನೂ ಬರೆದಿದ್ದೇವೆ.

SRI A. K. ABDUL SAMAD.—I will have it considered.

No. of submerged villages under the Malaprabha Irrigation Project.

528 SRI G. K. TAKKED (Parasgad).—Will the Minister for Revenue be pleased to state :—

(a) the number of villages submerged and their names thereof under the Malaprabha Irrigation Project in Soundathi and Bailhongal Taluks ;

(b) the amount of compensation paid so far to each of the such submerged villages ;

(c) the reasons for the delay in recovering the amount, ans whether action would be taken to recover or to waive ;

(d) the number of cases not disposed off by the Land Acquisition Officer so far and the reasons for such delay thereon ;

(e) the action taken by the Government against the Land Acquisition Officers for having caused delay ?

SRI MALLIKARJUNA M. KHARGE (Minister for Revenue) —

(a) Under Malaprabha Irrigation Project 22 villages completely and 12 villages partially in Sauvadatti taluk and 18 villages completely and 14 villages partially in Bylahongala taluk have been submerged list of the names of such submerged villages are laid on the Table of the House.

(b) A sum of Rs. 4,76,58,648-75 Ps. has been paid towards compensation in respect of submerged villages. List of compensation amount paid to each village is laid on the table of the House.

(c) More time is required to work out details individually according to Khatawise of Landlords as per the Court directions ; So far 788 cases out of 1051 cases, amounting Rs. 17,70,392-52 have been referred to Government Advocate for recovery process. The remaining 263 Cases have been referred to the concerned Government Advocate to workout details and to take further necessary action within 2-3 months.

(d) There are still 651 cases are pending disposal. Action is being taken according to the time schedule prescribed under the Land Acquisition Act and they will be disposed off expeditiously.

(e) The Land Acquisition cases are being disposed off as per the time schedule prescribed under the relevant Act, Suitable action will be taken against the erring Officers.

ಶ್ರೀ ಜಿ.ಕೆ. ತಕ್ಕೇಡ.—ಅಧ್ಯಕ್ಷರೇ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕಿನಲ್ಲಿ ಕ್ರಮವಾಗಿ ೨೨ ಹಾಗೂ ೧೮ ಹಳ್ಳಿಗಳು ಮುಳುಗಡೆಯಾಗುತ್ತವೆ. ಈ ಜನರಿಗೆ ಪುನರ್‌ವಸತಿ ಕಲ್ಪಿಸುವಾಗ ಸರ್ವಾಂಗೀಣ ಪ್ರಯತ್ನ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಇಲ್ಲಿಯವರೆವಿಗೂ ಅಲ್ಲಿ ಸರಿಯಾಗಿ ರಸ್ತೆ ಆಗಿಲ್ಲ. ಕುಡಿಯುವ ನೀರು ಇಲ್ಲ. ಅಲ್ಲಿ ಕಟ್ಟಡಕ್ಕೆ ಶಾಲಾಕಟ್ಟಡಗಳು ಬೀಳುವ ಸ್ಥಿತಿಗೆ ಬಂದಿವೆ. ಎಷ್ಟೋ ಕಡೆ ಪುನರ್ವಸತಿ ಕೂಡಾ ಆಗಿಲ್ಲ. ಸರ್ಕಾರ ಕೊಟ್ಟ ಎಷ್ಟೋ ಆಶ್ವಾಸನೆಗಳು ಸರ್ಕಾರಿ ಅಧಿಕಾರಿಗಳಿಂದ ಇನ್ನೂ ಏಕೆ ಕಾರ್ಯರೂಪಕ್ಕೆ ಬಂದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ ಪುನರ್ವಸತಿ ಕೆಲಸ ಮಾಡತಕ್ಕದ್ದನ್ನು ಈಗಾಗಲೇ ಸರ್ಕಾರ ಮಾಡುತ್ತಿದೆ. ಆದರೆ ಶ್ರೀಮಾನ್ ತಕ್ಕೇಡ್ ಅವರು ಪ್ರಥಮವಾಗಿ ಇದನ್ನು ಹೇಳುತ್ತಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ, ಶಾಲಾ ಕಟ್ಟಡಗಳು, ರಸ್ತೆ ಇಲ್ಲವೆಂದು ಹೇಳುತ್ತಿದ್ದಾರೆ. ಯಾವ ಯಾವ ಹಳ್ಳಿಗಳಲ್ಲಿ ಇಲ್ಲ ಎಂಬುದನ್ನು ಅವರು ನಮ್ಮ ಗಮನಕ್ಕೆ ತಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವುದಕ್ಕೆ ಹೇಳಲಿಕ್ಕೆ ನೆ.

ಶ್ರೀ ಜಿ.ಕೆ. ತಕ್ಕೇಡ್.—ಅಧ್ಯಕ್ಷರೇ, ಏಡಗಿ, ಸುತ್ತಗಟ್ಟಿ, ಈ ಸ್ಥಳಗಳಲ್ಲಿ ಶಾಲೆಗಳು ಇಲ್ಲ. ಅಸುಂಡಿ, ಬಳ್ಳಿಹಳ್ಳಿ -- ಈ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ವುನರ್ ವಸತಿ ಸಮಿತಿ ಯವರು ಸರ್ಕಾರಕ್ಕೆ ಜಿಲ್ಲಾಧಿಕಾರಿಗಳ ಮತ್ತು ಡಿವಿಜನಲ್ ಕಮಿಷನರ್‌ರ ಅಧ್ಯಕ್ಷತೆಯಲ್ಲಿ ಮತ್ತು ಮಲಪ್ರಭಾ ಘಟಪ್ರಭಾ ಯೋಜನಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನೇಕ ಠರಾವುಗಳನ್ನು, ನಿರ್ಣಯ ಗಳನ್ನು ಮಾಡಿ ಸರ್ಕಾರದ ಗಮನಕ್ಕೆ ತಂದರೂ ಕೂಡಾ ಯಾವ ಕಾರ್ಯವೂ ಕೂಡಾ ಆಗಿಲ್ಲ. ರಸ್ತೆ ಕೆಲಸ ಆಗಿಲ್ಲ. ಅಲ್ಲಿಯ ಹಳ್ಳಿಯ ಜನ ರೊಟ್ಟಿ ಕೂಡ ತಿಂದು ಬದುಕುವ ಸ್ಥಿತಿಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ನಮ್ಮಲ್ಲಿ ಇರತಕ್ಕ ಮಾಹಿತಿ ಪ್ರಕಾರ ಈ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ. ಎಲ್ಲೆಲ್ಲಿ ಯಾವ ಯಾವ ಭಾಗಗಳಲ್ಲಿ ಈ ವ್ಯವಸ್ಥೆಗಳು ಇಲ್ಲವೆಂದು ಪಟ್ಟಿ ಮಾಡಿ ಕೊಟ್ಟರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹೇಳಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ.

ಶ್ರೀ ಜಿ.ಕೆ. ತಕ್ಕೇಡ್.—ಇದು ಮಹತ್ವದ ಪ್ರಶ್ನೆ ಇದೆ. ನಾನು ಮುಖ್ಯವಾದ ಪ್ರಶ್ನೆಗೆ ಇನ್ನೂ ಬಂದಿಲ್ಲ. ನನಗೆ ಸರ್ಕಾರದಿಂದ ಉತ್ತರ ಬೇಕು.

ಅಧ್ಯಕ್ಷರು.—ಮುಂದಿನ ಪ್ರಶ್ನೆಗೆ ಅನುಮತಿ ಕೊಡಲಾಗಿದೆ. ತಾವು ಕುಳಿತುಕೊಳ್ಳಿ.

No. of Vacancies in Junior Colleges

576 SRI S. M. SHEERANALY CHANDRASEKHAR (Hosanagar).—Will the Minister for Education be pleased to state :—

(a) number of vacancies of Junior Class-I post kept vacant as on 1-7-1981.

(i) Junior College Principals

(ii) Educational Officers

(b) action taken to fill up these posts in the Educational department ;

(c) number of persons eligible to be filled up among the probationers who were recruited in Government notification No. ED 75 DPI 72 dated. 27-1-1973 (Excluding those who are already promoted)?

SRI G. B. SHANKAR RAO (Minister for Education).—

(a) 97.

(i) Junior College Principals	...	71
(ii) Educational Officers	...	26

(b) 27 posts of Junior College Principals and 26 Posts of Educational Officers have since been filled up.

(c) No notification has been issued on 27-1-1973 as referred to in question.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಮ್ಮ ಉತ್ತರದಲ್ಲಿ ೨೭ ಮಂದಿ ಪ್ರಿನ್ಸಿಪಾಲರ ಹುದ್ದೆಗಳನ್ನು ಭರ್ತಿ ಮಾಡಿರುವುದಾಗಿ ಹೇಳಿದ್ದೀರಿ ; ಆದರೆ ವಾಸ್ತವಿಕವಾಗಿ ಅಲ್ಲಿ ಖಾಲಿ ಇರತಕ್ಕ ಹುದ್ದೆಗಳು ೭೧. ಈ ರೀತಿ ಮಾಡಲು ಕಾರಣವೇನು ?